ಇಲ್ಲವೆಂದಾಯಿತು. ಕೆಲವೆಡೆ ಇವುಗಳು ತುಸು ಮುಕ್ತವಾಗಿದ್ದಂತೆ ಗೋಚರಿಸಿದರೂ, ಅಂತರ್ಯದಲ್ಲಿ 'ಆಕೆ ಅಷ್ಟೇನೂ ಚಲನಶೀಲಳಾಗುವುದು ಕ್ಷೇಮವಲ್ಲ' ಎಂಬ ಈ ವ್ಯಾಖ್ಯೆಯೊಂದು ಭದ್ರವಾಗಿ ಬಲಿತು ಕುಳಿತಿರುವುದು ಸುಳ್ಳಲ್ಲ.

## ತಿರುಗಿ ಕೆಟ್ಟವರುಂಟೆ?

ಪ್ರಯಾಣವೆಂಬುದು ಮಹಿಳೆಗೆ ಸೂಕ್ತವಾದುದಲ್ಲ ಎಂದೇ ಆಕೆಗೆ ಪದೇ ಪದೇ ಹೇಳಲಾಗುತ್ತದೆ. 'ಹೆಂಗಸು ತಿರುಗಿ ಕೆಟ್ಟಳು' ಎಂಬ ಮಾತಿನಲ್ಲಿ 'ಕೆಡುವಿಕೆ'ಯ ವ್ಯಾಖ್ಯೆಯೇನು ಎಂದು ಹುಡುಕುವುದೇನೂ ಕಷ್ಟವಲ್ಲ. ಅದಕ್ಕೆ ಅವಳೊಬ್ಬಳನ್ನೇ ಹೊಣೆ ಮಾಡಿ ಅಪರಾಧಿ ಎಂಬ ತೀರ್ಪು ಕೊಡುವ ಅವಸರವೂ ಹೊಸದಲ್ಲ.

ಜಗತ್ತು ಎಷ್ಟೇ ಆಧುನಿಕವಾಗುತ್ತಾ ಹೋದರೂ ಈ ಹೇಳುವಿಕೆಯಲ್ಲಿ ಯಾವುದೇ ಬದಲಾವಣೆಯಾದಂತೆ ಕಾಣುವುದಿಲ್ಲ. 'ನೀನು ಸದಾ ಪ್ರೀತಿ ಮತ್ತು ಮುಚ್ಚಟೆಯನ್ನು ನಿರೀಕ್ಷಿಸುತ್ತ, ಆ ನಿರೀಕ್ಷೆಯಲ್ಲಿಯೇ ಕ್ಷೇಮಭಾವವನ್ನು ಕಂಡುಕೊಳ್ಳುತ್ತಾ ಇರಬೇಕು' ಎಂಬ ಪಾಠವು ಒಂದಲ್ಲಾ ಒಂದು ರೀತಿಯಲ್ಲಿ ಹೆಣ್ಣುಮಗುವನ್ನು ಸದಾ ತಲುಪುತ್ತಾ ಇರುತ್ತದೆ.

''ಏಕಾಂಗಿಯಾಗಿ ಪ್ರಯಾಣಿಸುವ ಮಹಿಳೆಯು ಅನೇಕ ಅಪಾಯಗಳನ್ನು ಎದುರಿಸಬೇಕಾಗುತ್ತದೆ: ಒಂದೋ ಆಕೆಗೆ ಬರುತ್ತಿರುವ ಅಪಾಯಗಳ ಅರಿವಿರುವುದಿಲ್ಲ ಅಥವಾ ಆಕೆ ಅಪಾಯಗಳನ್ನು 'ಅಪಾಯ'ವೆಂದು ವ್ಯಾಖ್ಯಾನಿಸದ ನೀತಿಗೆಟ್ಟವಳಾಗಿರುತ್ತಾಳೆ'' ಎಂಬುದು ಸಂಪ್ರದಾಯಸ್ಥ ಸಮಾಜದ ನಿಲುವಾಗಿರುತ್ತದೆ. ಈ ನಿಲುವನ್ನು ಎರಡು ಆಯಾಮಗಳಲ್ಲಿ ವಿಶ್ಲೇಷಿಸಬಹುದು. ಮೊದಲನೆಯದು, ಏಕಾಂಗಿಯಾಗಿ ಪ್ರಯಾಣ ಮಾಡಿದಾಗ, 'ಆಕೆ ನೀತಿಗೆಡುವುದು' ಎಂದರೇನು? ಎರಡನೆಯದು, ಆಕೆಯ ಸುತ್ತಲಿನ ಸಮಾಜದ ಮನಸ್ಥಿತಿಯು ಮಹಿಳೆಯ ಕುರಿತು ಆರೋಗ್ಯಕರವಾಗಿ ಯೋಚಿಸುವುದು ಸಾಧ್ಯವಾದರೆ ಆಕೆಗೆಂದೇ ವಿಶಿಷ್ಟವಾದ ಅಪಾಯಗಳು ಬರುವುದು ಹೇಗೆ? ಅಂದರೆ, ಪುರುಷರಿಗೆ ಬರದೇ ಇರುವ ಅಪಾಯಗಳನ್ನು ಆಕೆ ಎದುರಿಸಬೇಕಾದ ಅನಿವಾರ್ಯತೆ ಹೇಗೆ ಸೃಷ್ಟಿಯಾಗುತ್ತದೆ? ಪುರುಷರು ಸೂಕ್ಷ್ಮ ಸಂವೇದನೆ ಹೊಂದಿದ್ದಾಗ ಆಕೆ ಸಹಜವಾಗಿಯೇ ಕ್ಷೇಮವಾಗಿ ಓಡಾಡಬಹುದಲ್ಲವೇ.

ಈ ಪ್ರಶ್ನೆಗಳಲ್ಲಿಯೇ ಉತ್ತರಗಳು ಅಡಗಿವೆ.

## ಮುಗಿಯದ ಪ್ರಯಾಣ, ತಿಳಿಯಾಗದ ಆತಂಕ

ಹಿಂದೆಲ್ಲ ರಾತ್ರಿ ಬಸ್ಸಿನಲ್ಲಿ ದೂರ ಪ್ರಯಾಣ ಮಾಡುವಾಗ ಒಂದು ಸಾಮಾನ್ಯ ದೃಶ್ಯವನ್ನು ಕಾಣುತ್ತಿದ್ದೆವು. ಆಗೆಲ್ಲ ಕೆಎಸ್ಸಾರ್ಟಿಸಿಯಲ್ಲಿ ಮಹಿಳೆಯರಿಗೆಂದು ಪ್ರತ್ಯೇಕ ಸೀಟ್ ಬುಕ್ ಮಾಡುವ ಅವಕಾಶಗಳಿರಲಿಲ್ಲ. ಮಗಳನ್ನೋ, ಪತ್ನಿಯನ್ನೋ, ತಂಗಿಯನ್ನೋ ಬಸ್ಸು ಹತ್ತಿಸಲು ಬರುವ ಪುರುಷರ ಮುಖದಲ್ಲಿ ತುಸು ಆತಂಕದ ಛಾಯೆಯಿರುತ್ತಿತ್ತು. ಒಬ್ಬಂಟಿಯಾಗಿ ಪ್ರಯಾಣಿಸುವ ಆ ಮಹಿಳೆಗೆ, ಮತ್ತೊಬ್ಬ ಮಹಿಳೆಯ ಜೊತೆಗೇ ಸೀಟು ಹೊಂದಿಸಿಕೊಟ್ಟರೆ ಅವರ ಮನಸ್ಸು ತುಸು ನಿರಾಳವೆನಿಸುತ್ತಿತ್ತು. ಅದಕ್ಕಾಗಿ ಅವರು ಅಲ್ಲೋ ಇಲ್ಲೋ ಸೀಟುಗಳಲ್ಲಿ ಕುಳಿತ ಪುರುಷರೊಡನೆ ಮನವಿ ಮಾಡಿ, 'ದಯಮಾಡಿ ಆ ಸೀಟಿನಲ್ಲಿ ಕೂರುವಿರಾ?' ಎಂದು ಮನವಿ ಮಾಡುತ್ತಿದ್ದರು. ಎಲ್ಲರ ಪಾಲಿಗೆ ಇದೊಂದು ಸಹಜ ದೃಶ್ಯವಾಗಿ ಕಾಣಬಹುದು. ಆದರೆ ತುಸು ವಿಚಾರ ಮಾಡಿ ನೋಡಿದರೆ ಪರಿಸ್ಥಿತಿಯ ವಿಪರ್ಯಾಸ ಸ್ಪಷ್ಟವಾಗಿ ಗೋಚರಿಸುತ್ತದೆ. ಈಗ ಈ ದೃಶ್ಯವು ಬಸ್ಸಿನೊಳಗೆ ನೇರವಾಗಿ ಕಣ್ಣಿಗೆ ಕಾಣಿಸುವುದಿಲ್ಲ. ಬದಲಾಗಿ ಆನ್‌ಲೈನ್‌ನಲ್ಲಿ ಸೀಟುಗಳನ್ನು ಬುಕ್ ಮಾಡುವಾಗ ಈ ರೀತಿಯ ಆಯ್ಕೆಗಳಿಗೆ ಆದ್ಯತೆ ಇದ್ದೇ ಇರುತ್ತದೆ. ಅಂದರೆ, ತನ್ನಂತಹುದೇ ಇನ್ನೊಬ್ಬ ಪುರುಷನ ಬಗ್ಗೆ ಪುರುಷರಿಗೇ ಕಿಂಚಿತ್ ನಂಬಿಕೆಯೂ ಇರುವುದಿಲ್ಲ. ಇನ್ನೊಬ್ಬ ಪುರುಷ 'ತಪ್ಪು ವರ್ತನೆ'ಯನ್ನು ಮಾಡದೇ ಇರಲಾರ ಎಂಬುದೇ ಎಲ್ಲರ ಮನಸ್ಸಿನಲ್ಲಿ ಅಚ್ಚೊತ್ತಿದ ಭಾವವಾಗಿರುತ್ತದೆ.

ತನ್ನ ಕುಟುಂಬದ ಮಹಿಳೆಯು ಪ್ರಯಾಣ ಮಾಡುವಾಗ ತನ್ನಂತಹ ಇನ್ನೊಬ್ಬ ಪುರುಷನು, ಸಹಪ್ರಯಾಣಿಕಳಿಗೆ ಕ್ಷೇಮಭಾವ ಕಲ್ಪಿಸುವಂತೆ ಮಾಡುವುದು ಪುರುಷ ವರ್ಗಕ್ಕೆ ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ. ಅಥವಾ ಆ ನಿಟ್ಟಿನಲ್ಲಿ ಗಂಡು ಮಕ್ಕಳಿಗೆ ಶಿಕ್ಷಣ ಕೊಡುವುದು ಇಂದಿಗೂ ಸಾಧ್ಯವಾಗಿಯೇ ಇಲ್ಲ. ಹೆಣ್ಣುಮಕ್ಕಳಿಗೆ ಬೋಧಿಸುವ ಭರಾಟೆಯಲ್ಲಿಯೇ ಎಲ್ಲರೂ ಮುಳುಗಿಹೋಗಿರುವಂತೆ ಭಾಸವಾಗುತ್ತಿದೆ.

ಇಂದಿಗೂ ರಾಜಕೀಯ ಕ್ಷೇತ್ರದಲ್ಲಿ, ಸಿನಿಮಾ ಕ್ಷೇತ್ರಗಳಲ್ಲಿ ಮಾತಿನ ಜಟಾಪಟಿಗಳು ನಡೆಯುವಾಗ, 'ಮಹಿಳೆಯರು ಅಡುಗೆ ಮಾಡಲು ಲಾಯಕ್ಕು' ಎಂದೋ, 'ಆಕೆಯೇನಿದ್ದರೂ ಗೆಜ್ಜೆ ಕಟ್ಟಿ ನೃತ್ಯ ಮಾಡಲಷ್ಟೇ ಸಾಧ್ಯ' ಎಂದೋ, 'ಈ ಮಹಿಳೆಯರೆಲ್ಲ ದಾರಿ ತಪ್ಪುತ್ತಿದ್ದಾರೆ' ಎಂಬಂತಹ ಹೇಳಿಕೆಗಳು ಹೊರಹೊಮ್ಮುತ್ತಿವೆ. ಇಂತಹ ಹೇಳಿಕೆಗಳನ್ನು ನೀಡುವ ವ್ಯಕ್ತಿಗಳು ಸಾಮಾಜಿಕವಾಗಿ ಗುರುತಿಸಿಕೊಂಡವರೇ ಆಗಿದ್ದಾರೆ. ಈ ಬೀಸು ಹೇಳಿಕೆಗಳನ್ನು ನೀಡುವಾಗ ಅವರ ಮನದಲ್ಲಿ ತಮ್ಮದೇ ಕುಟುಂಬದ ಮಹಿಳೆಯರ ಮುಖಗಳು ಯಾಕೆ ಹಾದು ಹೋಗುವುದಿಲ್ಲ? ಅಥವಾ ತಮ್ಮ ಮನೆಯ ಮಹಿಳೆಯರ ಬಗ್ಗೆಯೂ ಅವರ ಮನದಲ್ಲಿ ಇದೇ ನಿಲುವು ಇರುತ್ತದೆಯೇ?

ಇವುಗಳನ್ನೆಲ್ಲ ದಾಟಿಯೂ, ಇಂದು ಮಹಿಳೆಯ ಪ್ರಯಾಣ ಹಿಂದಿನಷ್ಟು ಕಷ್ಟಕರವಾಗಿಲ್ಲ ಎನ್ನುವುದು ನಿಜ. ಅದಕ್ಕೆ ಕಾರಣಗಳು ಹಲವಾರು ಇವೆ. ತಂತ್ರಜ್ಞಾನ ಮತ್ತು ಮಹಿಳೆಯ ಹಣಕಾಸು ಸ್ವಾತಂತ್ರ್ಯ



ನಾವಿರುವುದು ಪುರುಷಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ. ಈ ವ್ಯವಸ್ಥೆಗೆ ತನ್ನದೇ ಆದ ಚಾರಿತ್ರಿಕತೆ ಇದೆ. ಈ ತರಹದ ಮಾತುಗಳು 20ನೇ ಅಥವಾ 21ನೇ ಶತಮಾನದಲ್ಲಿ ಹುಟ್ಟಿಕೊಂಡಿದ್ದಲ್ಲ, ಸಾವಿರಾರು ವರ್ಷಗಳಿಂದ ಮಹಿಳೆಯನ್ನು ಅಬಲೆ ಮತ್ತು ದುರ್ಬಲಳೆಂದು ಚಿತ್ರಿಸಲಾಗಿದೆ. ಇದೊಂದು ಸಾಮಾಜಿಕ ವ್ಯವಸ್ಥೆಯಾದರೂ, ಅದರಲ್ಲಿ ಸಾಂಸ್ಕೃತಿಕ ರಾಜಕಾರಣವಿದೆ. ಮಹಿಳೆ ಯಾವಾಗಲೂ ದುರ್ಬಲ ಮತ್ತು ಬೇರೊಬ್ಬರ ಸಹಾಯವಿಲ್ಲದೆ ಬದುಕಲಾರರು ಎಂದು ಕಟ್ಟಿಕೊಡಲಾಗಿದೆ. ಇದೊಂದು ಪುರುಷ ಪ್ರಧಾನ ವ್ಯವಸ್ಥೆಯ ದೊಡ್ಡ ಪಿತೂರಿ. ಕಟ್ಟುಪಾಡು, ರೀತಿ ರಿವಾಜುಗಳನ್ನು ಹೇರಿ ಮಹಿಳೆಯನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳಲು ಪುರುಷ ಪ್ರಧಾನತೆ ಪ್ರಯತ್ನಿಸುತ್ತಿರುತ್ತದೆ. 21ನೇ ಶತಮಾನದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಪುರುಷರನ್ನು ಮೀರಿಸುವಷ್ಟು ಸದೃಢರಿರುವುದು ಅರಿವಿಗೆ ಬರುತ್ತಿದೆ. ಹಲವಾರು ಹೊಸ ಕಂಪನಿಗಳನ್ನು ಹುಟ್ಟು ಹಾಕಿ ಸಾಧನೆಗೈದಿದ್ದಾರೆ. ಆದರೆ ಪೋಷಣೆಯ ಹಂತದಲ್ಲಿ ಅವರಿಗೆ ನೀಡುವ ಶಿಕ್ಷಣದ ಶೈಲಿಯಲ್ಲಿ ಬದಲಾಗಿಲ್ಲ.

ನಾವು ಜಾತ್ರೆಗಳಲ್ಲಿ ಗಂಡು ಮಗುವಿಗೆ ಗನ್ ಅಥವಾ ಕಾರಿನಂತಹ ಆಟಿಕೆಗಳನ್ನು ಕೊಡಿಸುತ್ತೇವೆ. ಹೆಣ್ಣುಮಗುವಿಗೆ ಅಡುಗೆ ಸಾಮಾನುಗಳು ಅಥವಾ ಬಾರ್ಬಿ ಡಾಲ್ ಕೊಟ್ಟು ಮನೆಯ ಕೆಲಸಗಳಿಗೆ ತಯಾರು ಮಾಡುತ್ತೇವೆ. ಈ ತರಹದ ರಾಜಕಾರಣ ಮಾಡಿ ಮಹಿಳೆಯರು ಮನೆ ನೋಡಿಕೊಳ್ಳುವ ಹಾಗೆ, ಗಂಡುಮಕ್ಕಳು ಕೆಲಸ ಮತ್ತು ಹೊರ ಜಗತ್ತಿನ ವ್ಯವಹಾರಗಳನ್ನ ಮಾಡುವ ಹಾಗೆ ವ್ಯವಸ್ಥೆಯನ್ನು ನಾವೇ ನಿರ್ಮಾಣ ಮಾಡುತ್ತೇವೆ. ಇಂದಿನ ಮಹಿಳೆಯರು ಈ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥ ಮಾಡಿಕೊಂಡಿದ್ದಾರೆ. ಆದ್ದರಿಂದಲೇ ಬಹುಶಃ ಹೆಚ್ಚಿನ ಸಂಖ್ಯೆಯಲ್ಲಿ ಜಗತ್ತಿಗೆ ತೆರೆದುಕೊಳ್ಳುತ್ತಿದ್ದಾರೆ. ಹೊಸ ಆಲೋಚನಾಕ್ರಮ ಮತ್ತು ಪರಿಶ್ರಮದಿಂದ ಮುಂದೆ ಬರುತ್ತಿದ್ದಾರೆ, ಇದು ಇನ್ನಷ್ಟು ಹೆಚ್ಚಬೇಕು. ಆಗಷ್ಟೇ ಮನೆ, ಸಮಾಜ ಮತ್ತು ದೇಶ ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯ.

**-ಮಹೇಂದ್ರ ಎಂ.**

**ಸಹಾಯಕ ಪ್ರಾಧ್ಯಾಪಕ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ**